# ವೀಲಿಂಗ್‌ನಲ್ಲಿ ಉಳಿದಿದ್ದೇ ಬೋನಸ್

**ಚಂದನಾ ಜಿ.**

ಸ್ಟಾರ್‌ಸುವರ್ಣ 'ಸಿಂಧೂರ'ದ ಸುಮಾ



★ *ಉದ್ಯಮಿ ನಟಿಯಾದ ಬಗೆ ಹೇಗೆ?*

ನಟಿಯಾಗಿದ್ದು ಆಕಸ್ಮಿಕವಾಗಿ. ಓದು ಮುಗಿಸಿದ ತಕ್ಷಣ 'ಬಿಪಿಒ' ಕಂಪೆನಿಯೊಂದನ್ನು ಆರಂಭಿಸಿದೆ. ಕಾರ್ಯನಿಮಿತ್ತ ಒಮ್ಮೆ ಬೇರೊಂದು ಕಂಪೆನಿಗೆ ಹೋದ ಸಂದರ್ಭದಲ್ಲಿ ಸಿನಿಮಾಕ್ಕೆ ಆಹ್ವಾನ ಬಂತು. ತಕ್ಷಣ ಏನನ್ನೂ ಹೇಳಲು ಸಾಧ್ಯವಿಲ್ಲ ಎಂದೆ. ರಾತ್ರಿ ಮನೆಯಲ್ಲಿ ಊಟಕ್ಕೆ ಕುಳಿತಾಗ ವಿಷಯವನ್ನು ಪ್ರಸ್ತಾಪಿಸಿದೆ. ಎಲ್ಲರೂ 'ಯಾಕೆ ಅವಕಾಶ ಮಿಸ್ ಮಾಡಿಕೊಳ್ಳುತ್ತಿಯಾ?' ಎಂದು ಪ್ರಶ್ನಿಸಿದರು. ನಾನು ಉದ್ಯಮ ನೋಡಿಕೊಳ್ಳುವುದು ಕಷ್ಟ ಆಗಬಹುದು ಎಂದು ಆರು ತಿಂಗಳು ಅಭಿಪ್ರಾಯ ತಿಳಿಸಲು ಅವಕಾಶ ತೆಗೆದಕೊಂಡೆ. ಕೊನೆಗೂ ನಟನೆ ಇಷ್ಟ ಆಯಿತು. ಒಪ್ಪಿಕೊಂಡು ಮೂರು ಸಿನಿಮಾ ಮಾಡಿದೆ. ಅದಾದ ಮೇಲೆ 'ಸಿಂಧೂರ' ಅವಕಾಶ ಸಿಕ್ಕಿತು.

★ *ಸಿನಿಮಾದಿಂದ ಟಿವಿಗೆ ಹಿನ್ನಡೆ ಅನ್ನಿಸಲ್ವಾ?*

ಇಲ್ಲ. ಅನುಕೂಲ ಎಂದೇ ಬಂದಿದ್ದೇನೆ. ಸಿನಿಮಾದಲ್ಲಿ ಪ್ರವಾಸ ಹೆಚ್ಚಿರುತ್ತದೆ. ಆಗ ನನ್ನ ಉದ್ಯಮದ ಕಡೆ ಗಮನ ಕೊಡಲು ಆಗುವುದಿಲ್ಲ. ಕಿರುತೆರೆಯಾದರೆ ತಿಂಗಳಲ್ಲಿ 15ರಿಂದ 20 ದಿನ ಕೆಲಸ ಮಾಡಿದರೆ, ಉಳಿದ ದಿನ ಸ್ವಂತ ಕೆಲಸ ನೋಡಿಕೊಳ್ಳಬಹುದು. ಹೆಚ್ಚಾಗಿ ಬೆಂಗಳೂರಿನಲ್ಲಿಯೇ ಇರುತ್ತೇನೆ. ಎಲ್ಲಾ ನಿರ್ವಹಣೆ ಸುಲಭ ಎನ್ನುವ ಕಾರಣಕ್ಕೆ ಇದನ್ನು ಒಪ್ಪಿಕೊಂಡೆ.

★ *ಸುಮಾ ಮತ್ತು ಚಂದನಾ ಇಬ್ಬರ ನಡುವೆ ಹೋಲಿಕೆ ಹೇಗಿದೆ?*

ತುಂಬಾ ವ್ಯತ್ಯಾಸ ಇದೆ. ಸಾಹಸ ಪ್ರವೃತ್ತಿ ನನ್ನದು. ಸುಮಾಳದು ಸೌಮ್ಯ ಸ್ವಭಾವ. ಪೋಷಕರನ್ನು ಕಳೆದುಕೊಂಡ ಆಕೆ ತನ್ನ ತಂಗಿಗಾಗಿ ಜೀವನವನ್ನು ಮುಡಿಪಾಗಿ ಇಡುತ್ತಾಳೆ. ತುಂಬಾ ಮುಗ್ಧ ಹೆಣ್ಣುಮಗಳು ಸುಮಾ. ಚಂದನಾ ಹಾಗಲ್ಲ. ಭರ್ಜರಿಯಾಗಿ ಇರುತ್ತಾಳೆ. ಚಿಕ್ಕಂದಿನಲ್ಲೇ ಬೈಕ್ ರೈಡ್, ವೀಲಿಂಗ್ ಮಾಡುತ್ತಿದ್ದೆ. ಟ್ರೆಕಿಂಗ್ ಮಾಡುತ್ತೇನೆ. ಕಾಡುಮೇಡು ಅಲೆದು ನಿಸರ್ಗ ಸವಿಯುವ ಹವ್ಯಾಸ ನನ್ನದು. ಒಮ್ಮೆ ಭೀಕರ ಅಪಘಾತ ಆಯಿತು. ಬಸ್ಸಿಗೆ ಅಡ್ಡ ಬಿದ್ದೆ. ಕತ್ತಿನ ಮೇಲೆ ಬಸ್ ಚಕ್ರ ಹತ್ತಲಿಲ್ಲ ಬಚಾವ್ ಆದೆ. ಆನಂತರ್ ಬೈಕ್ ಫೋಬಿಯಾ ಕಾಡತೊಡಗಿತು. ಈಗ ಪರ್ವಾಗಿಲ್ಲ. ಆದರೆ ಕ್ರೇಜ್ ಹೋಗಿದೆ. ಹೋಲಿಕೆ ಒಂದೆಂದರೆ ನನಗೂ ತಂದೆ ಇಲ್ಲ.

★ *ನಿಮ್ಮ ಕುಟುಂಬದ ಬಗ್ಗೆ ಹೇಳುವುದಾದರೆ..*

ಅಜ್ಜಿಯ ಆರೈಕೆಯಲ್ಲಿ ಬೆಳೆದವಳು ನಾನು. ನನ್ನ ಅಜ್ಜಿಗೆ ಅಮ್ಮ ಎಂದೇ ಕರೆಯುವುದು. ನಮ್ಮ ತಾಯಿ ಉದ್ಯೋಗಸ್ಥೆ. ಆಕೆಗೆ ಐವರು ತಮ್ಮಂದಿರು. ಎಲ್ಲರೂ ಒಟ್ಟಿಗೆ ಈಗಲೂ ಇದ್ದೇವೆ. ಮಾವಂದಿರು, ಅತ್ತೆಯರು, ಅಜ್ಜಿ, ಅಮ್ಮ, ಮನೆ ಮಕ್ಕಳು ದೊಡ್ಡ ಕುಟುಂಬ. ಸಾಮಾನ್ಯವಾಗಿ ರಾತ್ರಿ ಎಲ್ಲರೂ ಒಟ್ಟಾಗಿ ಕುಳಿತು ಮಾತಾಡುತ್ತಾ ಊಟ ಮಾಡುವುದು ನಮ್ಮ ಕುಟುಂಬದ ಪದ್ಧತಿ.

■ ರಾಗು




**ಶ್ರೀಲಕ್ಷ್ಮಿಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ**

**ಶ್ರೀದುರ್ಗಾ ಕಾಳಿಕಮಾತಾದೇವಿಯ ಆರಾಧಕರು**

**ಕೇರಳದ ಪ್ರಖ್ಯಾತ ಜ್ಯೋತಿಷಿ ವಿದ್ವಾನ್ ಪಂಡಿತ್ ಶ್ರೀನಿವಾಸಭಟ್**

ಕೇರಳದ ಪುರಾತನ ಶಾಸ್ತ್ರೋಕ್ತ ಪದ್ಧತಿಗಳಿಂದ ಜಾತಕ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆ, ದೈವ ಪ್ರಶ್ನೆ, ಸಂಖ್ಯಾಶಾಸ್ತ್ರದ ಮೂಲಕ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ಸೂಚಿಸುತ್ತಾರೆ ನಿಮ್ಮ ಸಮಸ್ಯೆಗಳಾದ ವಿದ್ಯಾಭ್ಯಾಸ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ, ಸಾಲಬಾಧೆಯಿಂದ ಮುಕ್ತಿ ವಿವಾಹದಲ್ಲಿ ತೊಂದರೆ, ಸಂತಾನ ಸಮಸ್ಯೆ, ಸತಿ-ಪತಿ ಕಲಹ, (ಮಾಟ-ಮಂತ್ರ ತಡೆ), ಜನವಶ, ಧನವಶ, ಶತ್ರುವಶ, ಸ್ತ್ರೀಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆಯಾಗಲು ಇನ್ನೂ ಮುಂತಾದ ಸಮಸ್ಯೆಗಳಿಗೆ ಯಂತ್ರ-ಮಂತ್ರಗಳ ಶಕ್ತಿಯಿಂದ ಹಾಗೂ ಶ್ರೀ ದುರ್ಗಾಪರಮೇಶ್ವರಿದೇವಿಯ ಪೂಜಾಶಕ್ತಿಯಿಂದ

**ಕೆಲವೇ ದಿನಗಳಲ್ಲಿ ಪರಿಹಾರ ಶತಸಿದ್ಧ** **9900258800**